ನಾಟಕವಾಡುತ್ತಿದ್ದು ಮಂಗಳೂರಿನಲ್ಲಿ. ಪುತ್ತೂರು ಮಾಲಿಂಗೇಶ್ವರ ದೇವಾಲಯದ ಸಮೀಪದ ಟೆಂಟಿನಲ್ಲಿ ಒಂದೆರಡು ಬಾರಿ ಯಕ್ಷಗಾನ ನೋಡಿದ್ದೆ. ಚಂಡೆಮದ್ದಳೆಗಳ ಸದ್ದಿಗೆ, ವೇಷಧಾರಿಗಳ ಆರ್ಭಟಕ್ಕೆ ಕಿವಿ ತೆರೆದಿದ್ದೆ.

ಪತ್ರಿಕೆ ಮುದ್ರಣವಾಗುತ್ತಿದ್ದುದು ಮಂಗಳೂರಿನ ಶಾಂತಾ ಪ್ರೆಸ್ಸಿನಲ್ಲಿ, ಅದಕ್ಕಾಗಿ ತಿಂಗಳಲ್ಲಿ ನಾಲ್ಕೈದು ಬಾರಿಯಾದರೂ ಮಂಗಳೂರಿಗೆ ಹೋಗಿ ಬರಬೇಕಾಗುತ್ತಿತು. ಮಂಗಳೂರಿನ ಬೀದಿಗಳನ್ನು ಪರಿಚಯ ಮಾಡಿಕೊಳ್ಳಲು ಅವಕಾಶ ಸಿಗುತ್ತಿತ್ತು.

ಹೊಸ ಗೆಳೆಯರೂ ಸಿಕ್ಕಿದರು. ಕವಿ ಕಿರಣ (ನಾವಿಬ್ಬರೂ ಒಂದು ಬಾಡಿಗೆ ಕೋಣೆಯಲ್ಲಿ ಉಳಿದುಕೊಂಡು ಸಾಹಿತ್ಯ ಸಲ್ಲಾಪ ನಡೆಸುತ್ತಿದ್ದೆವು), ಸುಬ್ರಾಯ ಚೊಕ್ಕಾಡಿ ಹಾಗು ಮಂಗಳೂರಿನಲ್ಲಿ ವಿಶುಕುಮಾರ ಇವರ ಸ್ನೇಹ ಲಭಿಸಿತು.

ಜೊತೆಗೆ, ಶಿವರಾಮ ಕಾರಂತರ ಪರಿಚಯವಾಯಿತು, ಅವರು ನಮ್ಮ ಪತ್ರಿಕೆಗೆ ಪ್ರತಿ ತಿಂಗಳೂ ಲೇಖನ ಬರೆದುಕೊಡುತ್ತಿದ್ದರು. ಅದನ್ನು ತರಲೆಂದು ನಾನು ಬಾಲವನಕ್ಕೆ ಹೋಗುತ್ತಿದ್ದೆ. ಆ ವೇಳೆಗೆ ಬಾಲವನದಲ್ಲಿ ಹಿಂದೆ ನಡೆಯುತ್ತಿದ್ದ ಅನೇಕ ಚಟುವಟಿಕೆಗಳು ನಿಂತು ಹೋಗಿದ್ದವು. ಅಲ್ಲಿಗೆ ಬರುತ್ತಿದ್ದ ಮಕ್ಕಳಿಗೆ ಪರಿಚಯ ಮಾಡಿಕೊಡಲೆಂದು ಕಾರಂತರು ಸಾಕಿದ್ದ ಪ್ರಾಣಿ ಪಕ್ಷಿಗಳಿರಲಿಲ್ಲ. ಹರ್ಷ ಮುದ್ರಣಾಲಯದ ಯಂತ್ರಗಳು ಕೆಲಸ ಮಾಡುತ್ತಿರಲಿಲ್ಲ. ಅಲ್ಲಿ ಬೈಂಡಿಂಗ್ ಕೆಲಸ ಮಾತ್ರ ನಡೆಯುತ್ತಿತ್ತು.

ಕಾರಂತರು ಮಹಡಿ ಮೇಲಿನ ತಮ್ಮ ಕೋಣೆಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದರು. ನನ್ನನ್ನು ಕಂಡ ಕೂಡಲೇ ಪತ್ನಿ ಲೀಲಾ ಕಾರಂತರಿಗೆ ವಿಷಯ ತಿಳಿಸುತ್ತಿದ್ದರು. ಬೆಳಗಿನ ಕಾಫಿ ತಿಂಡಿ ಜೊತೆಗೆ ಲೀಲಾ ಅವರ ಉಪಚಾರವೂ ಧಾರಾಳ ಸಿಗುತ್ತಿತ್ತು. ಒಮ್ಮೆ ಅವರ ಮನೆಯಲ್ಲಿ 'ಕೊಟ್ಟಿಗೆ' ಕಡಬು ಮಾಡಿದ್ದರು. ತುಪ್ಪ ಮತ್ತು ಚಟ್ನಿ ಜೊತೆಗೆ ನಾನು ಕಡುಬು ಮೆಲ್ಲುತ್ತಿದ್ದಾಗ, ಲೀಲಾ ಅವರು ಮಗಳಿಗೆ ಜಡೆ ಹೆಣೆಯುತ್ತ, ಹಲಸಿನ ಎಲೆಯನ್ನು ಹೊಲಿದು, ಹಬೆಯಲ್ಲಿ 'ಕೊಟ್ಟಿಗೆ' ಕಡುಬು ತಯಾರಿಸುವ ವಿಧಾನವನ್ನು ನನಗೆ ತಿಳಿಸಿದ್ದರು.

ಕಾರಂತರ ಮಕ್ಕಳಾದ ಮಾಳವಿಕಾ, ಕ್ಷಮಾ ಮತ್ತು ಉಲ್ಲಾಸರು ಆಗ ಎಂಟರಿಂದ ಹನ್ನೆರಡರ ಪ್ರಾಯದವರು. ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಕಲಿಯುತ್ತಿದ್ದರು. ಹಿಂದಿನ ದಿನ ಶಾಲೆಯ ವಾರ್ಷಿಕೋತ್ಸವದಲ್ಲಿ ಮಾಳವಿಕಾರ ನೃತ್ಯ ಪ್ರದರ್ಶನವಿತ್ತೆಂದು ಕಾಣಿಸುತ್ತದೆ. ಉಲ್ಲಾಸ ಅಕ್ಕನ ನೃತ್ಯವನ್ನು ಕೀಟಲೆ ವಿಮರ್ಶೆಗೊಳಪಡಿಸಿದಾಗ, ಲೀಲಾ ಅವರು ಹುಸಿ ಕೋಪ ತೋರಿಸುತ್ತ 'ಹೋಗೋ ಅತ್ಲಾಗೆ' ಎಂದು ಆತನನ್ನು ಗದ್ದರಿಸಿದ್ದು, ಆದರೂ ಉಲ್ಲಾಸ ಕೀಟಲೆ ಮುಂದುವರಿಸಿದ್ದುದು ನನ್ನ ನೆನಪಿಗೆ ಬರುತ್ತಿದೆ.

ಕಾರಂತರು ನಿಗದಿತ ದಿನಕ್ಕೆ ಸರಿಯಾಗಿ ಲೇಖನ ಸಿದ್ಧಪಡಿಸಿಟ್ಟಿರುತ್ತಿದ್ದರು. ನೀಲಿ ಇಂಕಿನಲ್ಲಿ ಬರೆದ ಲೇಖನವನ್ನು ಮತ್ತೊಮ್ಮೆ ಓದುವಾಗ ಅಕ್ಷರ ದೋಷಗಳಿದ್ದರೆ ಹಸಿರು ಇಂಕಿನಲ್ಲಿ ತಿದ್ದಿರುತ್ತಿದ್ದರು.

ಆ ಸಂದರ್ಭದಲ್ಲಿ ಕಾರಂತರು 'ಬಾಲ ಪ್ರಪಂಚ' ಗ್ರಂಥ ರಚನೆಯಲ್ಲಿ ತೊಡಗಿಕೊಂಡಿದ್ದರು. ಅದು ಮಣಿಪಾಲ ಪ್ರೆಸ್ಸಿನಲ್ಲಿ ಮುದ್ರಣವಾಗುತ್ತಿತ್ತು. ಕಾರಂತರು ಪುತ್ತೂರಿನಿಂದಲೇ ಅದರ ಕರಡು ತಿದ್ದಿ ಕಳಿಸಿಕೊಡುತ್ತಿದ್ದರು. ಕೆಲವು ಚಿತ್ರಗಳನ್ನು ಅವರೇ ಬರೆಯುತ್ತಿದ್ದರು. ಸೃಜನಶೀಲ ಲೇಖಕರ ಆ ಕೋಣೆ ಇಂಡಿಯನ್ ಇಂಕ್ ಬ್ರಷ್ಷುಗಳು, ಬಗೆಬಗೆಯ ಬಣ್ಣದ ಡಬ್ಬಿಗಳು, ಕರಡುಗಳ ಜೊತೆಗೆ ಒಬ್ಬ ಕಲಾಕಾರನ ಕೋಣೆಯೂ ಆಗಿತ್ತು.